# ಸುಕುಮಾರಸ್ವಾಮಿಯ ಕಥೆ: ಋಣಪ್ರಜ್ಞೆಯ ಒಂದು ಅವಲೋಕನ

**ಕುರುಬರ ಗಾದಿಲಿಂಗಪ್ಪ***

**DOI: https://doi.org/10.5281/zenodo.21438198**

**ABSTRACT**

ಶಿವಕೋಟ್ಯಾಚಾರ್ಯರ 'ವಡ್ಡಾರಾಧನೆ'ಯ ಸುಕುಮಾರಸ್ವಾಮಿಯ ಕಥೆಯ ಹಿನ್ನೆಲೆಯಲ್ಲಿ 'ಋಣಪ್ರಜ್ಞೆ'ಯ ತಾತ್ವಿಕ ಮತ್ತು ವ್ಯಾವಹಾರಿಕ ಆಯಾಮಗಳನ್ನು ವಿಶ್ಲೇಷಿಸಲಾಗಿದೆ. ಲೌಕಿಕ ಸಾಲ ಹಾಗೂ ಅಲೌಕಿಕ ಕೃತಜ್ಞತೆ ಎಂಬ ಋಣದ ಎರಡು ಮುಖಗಳನ್ನು ಪರಿಚಯಿಸುತ್ತಾ, ವಿಶೇಷವಾಗಿ 'ಗುರುಋಣ'ದ ಮಹತ್ವವನ್ನು ಮುನ್ನೆಲೆಗೆ ತರಲಾಗಿದೆ. ಗುರು ಸೂರ್ಯಮಿತ್ರ, ಶಿಷ್ಯರಾದ ಅಗ್ನಿಭೂತಿ ಮತ್ತು ವಾಯುಭೂತಿಯ ಪಾತ್ರಗಳ ಮೂಲಕ ವಿಧೇಯತೆ ಹಾಗೂ ಅವಿಧೇಯತೆಯ ಪರಿಣಾಮಗಳನ್ನು ಮಾರ್ಮಿಕವಾಗಿ ಕಟ್ಟಿಕೊಡಲಾಗಿದೆ. ಗುರುವಿನಲ್ಲಿ ಕೃತಜ್ಞತೆ ತೋರಿದ ಅಗ್ನಿಭೂತಿ ಜೈನದೀಕ್ಷೆ ಪಡೆದು ಉದ್ಧಾರವಾದರೆ, ಅಹಂಕಾರದಿಂದ ಗುರುನಿಂದನೆ ಮಾಡಿದ ವಾಯುಭೂತಿ ಅನೇಕ ಕೀಳು ಜನ್ಮಗಳನ್ನೆತ್ತಿ ತೀವ್ರ ಯಾತನೆ ಅನುಭವಿಸುತ್ತಾನೆ. ಅಂತಿಮವಾಗಿ ಸಹೋದರನ ಮೇಲಿನ ಋಣಾನುಬಂಧದಿಂದ ಅಗ್ನಿಭೂತಿಯೇ ವಾಯುಭೂತಿಗೆ ಧರ್ಮಬೋಧೆ ಮಾಡಿ ಸನ್ಮಾರ್ಗಕ್ಕೆ ತರುತ್ತಾನೆ. ಮಾನವ ಸಂಬಂಧಗಳಲ್ಲಿ, ವಿಶೇಷವಾಗಿ ಗುರು-ಶಿಷ್ಯ ಪರಂಪರೆಯಲ್ಲಿ ಋಣಪ್ರಜ್ಞೆಯು ಹೇಗೆ ವ್ಯಕ್ತಿತ್ವ ವಿಕಸನಕ್ಕೆ ಹಾಗೂ ಆತ್ಮೋದ್ಧಾರಕ್ಕೆ ಕಾರಣವಾಗುತ್ತದೆ ಎಂಬ ಮೌಲ್ಯಯುತ ಸಂದೇಶವನ್ನು ಕಥೆಯ ಆಂತರ್ಯದಿಂದ ಮಾರ್ಮಿಕವಾಗಿ ಶೋಧಿಸಲಾಗಿದೆ.

**KEYWORDS:** ಸುಕುಮಾರಸ್ವಾಮಿಯ ಕಥೆ, ವಡ್ಡಾರಾಧನೆ, ಋಣಪ್ರಜ್ಞೆ, ಗುರುಋಣ, ಜೈನಧರ್ಮ.

* **ಕುರುಬರ ಗಾದಿಲಿಂಗಪ್ಪ,** ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿ.ಎಂ. ಪಂಚಕಟ್ಟಿಮಠ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲೋಕಾಪುರ, ಮುಧೋಳ ತಾಲೂಕು, ಬಾಗಲಕೋಟೆ.

ಋಣದ ಪ್ರಜ್ಞೆ ಅಥವಾ ಋಣದ ಮೌಲ್ಯವು ವ್ಯಕ್ತಿ ವ್ಯಕ್ತಿಯನ್ನು, ವ್ಯಕ್ತಿ ಮತ್ತು ಕುಟುಂಬವನ್ನು, ವ್ಯಕ್ತಿ ಮತ್ತು ಸಮಾಜವನ್ನು, ಪ್ರಭುತ್ವ ಮತ್ತು ಪ್ರಜೆಗಳನ್ನು ವ್ಯಾವಹಾರಿಕವಾಗಿಯೂ, ಭಾವನಾತ್ಮಕವಾಗಿಯೂ ಬೆಸೆಯುವ ಒಂದು ಸದ್ಬಂಧವೂ, ಸದ್ಭಾವವೂ ಆಗಿ ಸಮಾಜದಲ್ಲಿ ಮೌಲ್ಯದ ಸ್ವರೂಪವನ್ನು ಪಡೆದುಕೊಂಡಿದೆ. ಈ ಋಣಪ್ರಜ್ಞೆಯು ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಒಂದು ರೂಪದಲ್ಲಿ ನೆರವಾಗುವಂತ ಮೌಲ್ಯವಾಗಿ ಕಂಡುಬರುತ್ತದೆ. 'ಋಣ' ಪದದ ಅರ್ಥವನ್ನು ಎರಡು ರೀತಿಯಲ್ಲಿ ಪ್ರಯೋಗವಾಗುತ್ತಿರುವುದನ್ನು ಗುರುತಿಸಬಹುದು.

1. ಸಾಲ, ಹಂಗು, ಅಧೀನತೆ, ಬಂಧ ಮುಂತಾದ ಅರ್ಥಗಳಲ್ಲಿ ಹಾಗೂ
2. ಉಪಕಾರ ಸ್ಮರಣೆ, ಕೃತಜ್ಞತೆ, ನಿಷ್ಠೆ, ವಿಧೇಯತೆ, ಸದ್ಭಾವನೆ ಎನ್ನುವ ಮುಂತಾದ ಅರ್ಥಗಳಲ್ಲಿಯೂ 'ಋಣ' ಪದವು ಪ್ರಯೋಗವಾಗುತ್ತದೆ.

ಇಲ್ಲಿ ಮೊದಲನೆಯ ಅರ್ಥಗಳಲ್ಲಿ ಪ್ರಯೋಗವಾಗುವ ಪದಗಳು ವ್ಯಾವಹಾರಿಕವೂ ಮತ್ತು ಋಣಾತ್ಮಕವಾದವು ಎಂದೂ, ಎರಡನೆಯ ಅರ್ಥಗಳಲ್ಲಿ ಪ್ರಯೋಗವಾದ ಪದಗಳು ಭಾವನಾತ್ಮಕವೂ ಮತ್ತು ಧನಾತ್ಮಕವಾದವೂ ಎಂದು ವಿಭಾಗಿಸಿಕೊಳ್ಳಬಹುದು. ಇಲ್ಲಿ ತೀರಿಸಬಹುದಾದ ಋಣಗಳನ್ನು ಲೌಕಿಕ ಋಣ ಅಥವಾ ವ್ಯಾವಹಾರಿಕ ಋಣ ಎಂದು, ತೀರಿಸಲಾಗದ ಋಣಗಳನ್ನು ಭಾವನಾತ್ಮಕ ಅಥವಾ ಅಲೌಕಿಕ ಋಣ ಎಂದು ಕರೆಯಲಾಗಿದೆ. ಇಲ್ಲಿ ತೀರಿಸಬಹುದಾದ ಋಣಗಳೆಂದರೆ ವಸ್ತು ಅಥವಾ ದ್ರವ್ಯದ ಸ್ವರೂಪದಲ್ಲಿ ಪಡೆದುಕೊಂಡಿರುವುದು. ಇನ್ನು, ತೀರಿಸಲಾಗದ ಋಣಗಳೆಂದರೆ ದೈವ ಋಣ, ಪಿತೃ ಋಣ ಹಾಗೂ ಗುರು ಋಣಗಳು. ಪ್ರಸ್ತುತ ಲೇಖನದಲ್ಲಿ, ಸುಕುಮಾರಸ್ವಾಮಿ ಕಥೆಯ ಹಿನ್ನೆಲೆಯಲ್ಲಿ ಗುರು ಋಣವನ್ನು ಕುರಿತ ಜಿಜ್ಞಾಸೆಯನ್ನು ನಡೆಸಲಾಗಿದೆ.

ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯ ಹತ್ತೊಂಬತ್ತು ಕಥೆಗಳಲ್ಲಿ ಸುಕುಮಾರಸ್ವಾಮಿಯ ಕಥೆಯು ಕಥಾವಿಸ್ತಾರದ ದೃಷ್ಟಿಯಿಂದ ದೊಡ್ಡದಾದ ಕಥೆ. ಜೈನಧರ್ಮದ ಶ್ರೇಷ್ಠತೆ ಮತ್ತು ಅದರ ಮಹತ್ವವನ್ನು ಸಾರುವುದರ ದೃಷ್ಟಿಯಿಂದ ಪ್ರಾತಿನಿಧಿಕವಾದ ಕಥೆಯಾಗಿದೆ. ಇಲ್ಲಿ ಗುರುವಾದವನು ಹೇಗೆ ನಡೆದುಕೊಳ್ಳಬೇಕು ಮತ್ತು ಅವನ ಗುಣಗಳು ಹೇಗಿರಬೇಕು? ಶಿಷ್ಯನಾದವನ ನಡೆ-ನುಡಿಗಳು ಹೇಗಿರಬೇಕು? ಗುರು-ಶಿಷ್ಯರನ್ನು ಋಣದ ಬಂಧವು ಹೇಗೆ ಆವರಿಸಿದೆ? ಗುರು-ಶಿಷ್ಯರ ಮಧ್ಯದಲ್ಲಿ ಬರುವ ಋಣದ ಭಾವ ಎಂತಹದು? ಋಣ ಸಂದಾಯದ ಸ್ವರೂಪಗಳೇನು? ಎನ್ನುವ ಪ್ರಶ್ನೆಗಳಿಗೆ ಎದುರುಗೊಳ್ಳುವುದರ ಹಿನ್ನೆಲೆಯಲ್ಲಿ ಒಂದು ಮೌಲ್ಯವಾಗಿ ರೂಪುಗೊಂಡಿರುವ 'ಋಣ'ದ ಮೂರ್ತಾಮೂರ್ತ ಸ್ವರೂಪಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗುವುದು.

ವಡ್ಡಾರಾಧನೆಯ ಕಥೆಗಳಲ್ಲಿ ಋಣ ಮತ್ತು ಋಣ ಸಂದಾಯದ ಸನ್ನಿವೇಶಗಳು ಮತ್ತು ಪ್ರಸ್ತಾಪಗಳು ನೇರವಾಗಿ ಬರುವುದಿಲ್ಲ. ಆದರೂ ಕಥೆಗಳಲ್ಲಿ ಬರುವ ಮಾತಾಪಿತೃ-ಮಕ್ಕಳ ಸಂಬಂಧದ ಪಾಲನೆಪೋಷಣೆಯಲ್ಲಿ, ಗುರು-ಶಿಷ್ಯರ ಕಲಿಸುವ-ಕಲಿಯುವ ಪ್ರಸಂಗಗಳಲ್ಲಿನ ಕರ್ತವ್ಯ, ಜವಾಬ್ದಾರಿ ಹಾಗೂ ವಿಧೇಯತೆ ನಡೆಯಲ್ಲಿ ಋಣಪ್ರಜ್ಞೆಯು ಜಾಗೃತವಾಗಿರುವುದನ್ನು ಗ್ರಹಿಸಲು ಅವಕಾಶಗಳಿವೆ. ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವುದು ಗುರುವಾದವನ ಆದ್ಯ ಕರ್ತವ್ಯ, ನಿಸ್ವಾರ್ಥದಿಂದ ಕಲಿಸುವ ಮೂಲಕ ತನ್ನ ಬದುಕನ್ನು ಸಾರ್ಥಕವಾಗಿಸಿಕೊಳ್ಳಬೇಕಾಗುತ್ತದೆ. ಹಾಗೆಯೇ, ಶಿಷ್ಯನಾದವನು ಕೂಡ ಕಲಿಸುವ, ಕಲಿಸಿದ ಗುರುವಿನಲ್ಲಿ ವಿಧೇಯತೆಯನ್ನು, ಕೃತಜ್ಞತೆ ಇರಿಸಿಕೊಳ್ಳಬೇಕು. ಅಲ್ಲದೇ, ಒಬ್ಬ

ಗುರುವಿನ ಮುಖೇನವೇ ಶಿಷ್ಯನಾಗಿ ಕಲಿತು ಗುರುವಾಗಿರುವವನು ಅಧ್ಯಯನ ಮತ್ತು ಅಧ್ಯಾಪನಗಳಿಂದ ಗುರುಋಣವನ್ನು ತೀರಿಸಬೇಕು ಎಂದು ಅನೇಕ ಪ್ರಾಚೀನ ಕೃತಿಗಳು, ನಿಘಂಟು ಮತ್ತು ಕೋಶಗಳು ಪ್ರಸ್ತಾಪಿಸಿವೆ.

ಗುರುವಾದವನು ಹೇಗೆ ನಡೆದುಕೊಳ್ಳಬೇಕು ಮತ್ತು ಅವನ ಗುಣಗಳೇಗಿರಬೇಕು? ವಿದ್ಯಾರ್ಥಿಗಳಿಗೆ ಕಲಿಸುವ ಸಮಯದಲ್ಲಿ ಗುರುವು ತನ್ನ ವೈಯಕ್ತಿಕತೆಯನ್ನು ಮತ್ತು ಇತರ ಸಂಬಂಧಗಳ ವ್ಯಾಮೋಹವನ್ನು ಕಳೆದುಕೊಂಡು ಗುರುವಾದವನು ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯನ್ನು ಮಾಡಿಸುವಾಗ ಹೇಗೆ ನಿಷ್ಠುರನು, ನಿರ್ಮೋಹಿತನು ಆಗಿರಬೇಕಾಗುತ್ತದೆ ಎಂಬುದಕ್ಕೆ ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕಥೆಯಲ್ಲಿ ಬರುವ ಸೂರ್ಯಮಿತ್ರ ಮತ್ತು ಕಾಶ್ಯಪಿಯ ಮಕ್ಕಳಾದ ಅಗ್ನಿಭೂತಿ ಮತ್ತು ವಾಯುಭೂತಿಯ ಹಿನ್ನೆಲೆಯಲ್ಲಿ ಗಮನಿಸಬಹುದು.

ಸೂರ್ಯಮಿತ್ರರು, ಅಗ್ನಿಭೂತಿ ಮತ್ತು ವಾಯುಭೂತಿಯರು ತಮ್ಮ ತಂದೆತಾಯಿಯರ ಮಾತು ಕೇಳದೆ ಒಳ್ಳೆಯ ರೀತಿಯಲ್ಲಿ ಅಧ್ಯಯನವನ್ನು ಮಾಡದೆ, ತಂದೆ ಸೋಮಶರ್ಮರು ಸಂಪಾದಿಸಿದ ಸಂಪತ್ತನ್ನೆಲ್ಲ ಅನಗತ್ಯವಾಗಿ ಖರ್ಚು ಮಾಡುತ್ತ, ಅಷ್ಟವ್ಯಸನಗಳ ದಾಸರೂ, ಮೂರ್ಖರೂ, ಸೋಮಾರಿಗಳಾದ ಇವರು ರಾಜನ ಸಭೆಯಲ್ಲಿ ಅವಮಾನಿತರಾಗಿ, ತಂಗಿಯ ಆಣತಿಯಂತೆ ವಿದ್ಯಾರ್ಜನೆಗಾಗಿ ಬಂದಿರುವರೆಂಬುದನ್ನು ತನ್ನ ತಂಗಿಯಾದ ಕಾಶ್ಯಪಿಯು ಕಳುಹಿಸಿದ ಪತ್ರದಿಂದ ಅರಿತು, ತಮ್ಮ ಅಳಿಯಂದಿರಾದ ಅಗ್ನಿಭೂತಿ ಮತ್ತು ವಾಯುಭೂತಿಯರಿಗೆ ಸೂರ್ಯಮಿತ್ರನು ಹೀಗೆ ಹೇಳುವನು: "ಕಾಶ್ಯಪಿಯೆಂಬೊಳೆನಗೆ ತಂಗೆಯಿಲ್ಲ ಸೋಮಶರ್ಮನೆಂಬೊಂ ಮೈದುನನುಮಿಲ್ಲ ಸೂರ್ಯಮಿತ್ರನೆಂಬ ಹೆಸರೆನಗುಂಟು ನಿಮ್ಮ ಮಾವನಪ್ಪ ಸೂರ್ಯಮಿತ್ರನಲ್ಲೆನೆಂದವರ್ಗ್ಗೆ ನುಡಿದುಂ ಮತ್ತಮಿಂತೆಂದಂ ನೀಮಾರ್ಗ್ಗರಾದೊಡಮೇಂ ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಟ್ಟಿಯೊಳ್ ಬಂದಿರಪ್ಪೊಡೆ ಬೆದಕಂದಿರಿದು ಕಪ್ಪಡಮುಟ್ಟಿರುಳುಂ ಪಗಲುಮಲಸದೆ ನಿರ್ಬಂಧದಿಂದೋದಲಾರ್ಪೊಡೆ ನಿಮ್ಮನೋದಿಸಲಕ್ಕಂ" (ಕೇಶವ ಭಟ್ಟ ಟಿ, ಶಿವಕೋಟ್ಯಾಚಾರ್ಯರ ವಡ್ಡಾರಾಧನೆ, ಪು.10) ಎಂದರು. ಅದಕ್ಕೆ ಅವರು ಅನುಗ್ರಹವೆಂದು ವಂದಿಸಿ, ಏಳು ವರ್ಷಗಳ ಕಾಲ ಕಟ್ಟುನಿಟ್ಟಿನಿಂದ ವಿದ್ಯಾಭ್ಯಾಸ ಮಾಡಿ, ಸಕಲ ಶಾಸ್ತ್ರ, ವೇದ, ವೇದಾಂಗ, ಪುರಾಣಗಳೆಲ್ಲವನ್ನು ಕಲಿತು, ಯೋಗ್ಯರಾಗಿ, ಗುರುವಿಗೆ ಕೃತಜ್ಞತೆಯನ್ನು ಸಲ್ಲಿಸಿ ತಮ್ಮ ಪಟ್ಟಣಕ್ಕೆ ಮರಳುವಾಗ ಗುರುಗಳಾದ ಸೂರ್ಯಮಿತ್ರರು ವಾಯುಭೂತಿ ಮತ್ತು ಅಗ್ನಿಭೂತಿಯರಿಗೆ, ಕಾಶ್ಯಪಿಯು ನನ್ನ ತಂಗಿ, ನೀವು ನನ್ನ ಅಳಿಯಂದಿರಾಗಬೇಕು. ಪ್ರಾರಂಭದಲ್ಲಿ ನೀವು ವಿದ್ಯಾರ್ಜನೆಗೆಂದು ಕೇಳಿಕೊಂಡು ಬಂದಾಗಲೇ ಈ ಸತ್ಯವನ್ನು ಒಪ್ಪಿಕೊಂಡಿದ್ದರೆ, ನೀವು ನಿಮ್ಮ ತಂದೆಯು ಕೊಟ್ಟ ಸಲುಗೆಯಿಂದಾಗಿ ಮೂರ್ಖರು, ಸೋಮಾರಿಗಳು ಆಗಿ, ದೊರೆಯುತ್ತಿದ್ದ ಮಂತ್ರಿ ಪದವಿಯನ್ನು ಕಳೆದುಕೊಂಡು, ಇಲ್ಲಿಗೆ ವಿದ್ಯೆ ಕಲಿಯಲು ಬಂದಿರುವಿರಿ. ಮೊದಲೇ ನಿಜವನ್ನು ಹೇಳಿದ್ದರೆ, ನಮ್ಮ ಬಳಿಯೂ ಸಲುಗೆಯನ್ನು ಬೆಳೆಸಿಕೊಂಡು ಸರಿಯಾಗಿ ವಿದ್ಯಾಭ್ಯಾಸ ಮಾಡುವುದಿಲ್ಲವೆಂದು ಭಾವಿಸಿ ನಿಮಗೆ ಈ ಸತ್ಯವನ್ನು ಹೇಳಲಿಲ್ಲ ನನ್ನ ಕ್ಷಮಿಸಿ ಎಂದು ಹೇಳಿದರು. ಆಗ, ಹಿರಿಯನಾದ, ಅಗ್ನಿಭೂತಿ ಮಾವನು ನಮಗೆ ಸಲುಗೆ ಕೊಟ್ಟು ಹಾಳುಗೆಡವದೆ, ಶಿಸ್ತಿನಿಂದ ವಿದ್ಯಾಭ್ಯಾಸವನ್ನು ಮಾಡಿಸಿ, ನಮ್ಮಿಬ್ಬರನ್ನು ವಿದ್ಯಾವಂತರು, ವಿವೇಕಿಗಳು ಮತ್ತು ಯೋಗ್ಯರನ್ನಾಗಿ ಮಾಡಿದರು ಎಂದು ಉಪಕಾರವನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡು ಅತ್ಯಂತ ಸಂತೋಷಪಟ್ಟನು. ಕಿರಿಯವನಾದ ವಾಯುಭೂತಿ, ತಮಗೆ ಸೂರ್ಯಮಿತ್ರನು ಮಾಡಿದುದು ಅಪಕಾರವೆಂದೇ ಬಗೆದನು. ಒಲ್ಲದ ಮನಸ್ಸಿನಿಂದ

ಸೂರ್ಯಮಿತ್ರರಿಗೆ ನಮಸ್ಕರಿಸಿ ಕೌಶಂಬಿಗೆ ಹೊರಟರು.

ಇದೇ ಕಥೆಯ ಇನ್ನೊಂದು ಪ್ರಸಂಗದಲ್ಲಿ ಗುರು-ಶಿಷ್ಯರ ನಡುವಿನ ವಿಧೇಯತೆ ಮತ್ತು ಅವಿಧೇಯತೆಯ ಮಾತುಗಳು ಹೀಗಿದೆ: ಬ್ರಾಹ್ಮಣರಾಗಿರುವ ಸೂರ್ಯಮಿತ್ರರು ಜೈನಯತಿಯಾಗಿರುವ ಸುಧಾದತ್ತಾಚಾರ್ಯರ ತ್ರಿಕಾಲ ಜ್ಞಾನ, ಜ್ಯೋತಿಷ್ಯದ ಜ್ಞಾನಕ್ಕೆ ಮಾರುಹೋಗಿ, ಅವರಿಂದ ಜೈನದೀಕ್ಷೆಯನ್ನು ಸ್ವೀಕರಿಸಿ, ಜೈನಧರ್ಮದ ಆಚಾರ-ವಿಚಾರಗಳನ್ನು ಮತ್ತು ಪಂಚಾಣುವ್ರತಗಳನ್ನು ಮೊದಲು ಕಲಿತು, ನಂತರದಲ್ಲಿ ಜ್ಯೋತಿಷ್ಯವನ್ನು ಕಲಿತು, ಗುರುವಿನಿಂದ ಅಪ್ಪಣೆಯನ್ನು ಪಡೆದುಕೊಂಡು ಪರಿವ್ರಾಜಕರಾಗಿ (ಏಕವಿಹಾರಿಯಾಗಿ) ಸಂಚಾರ ಮಾಡುತ್ತ, ಭಿಕ್ಷೆಯನ್ನು ಬೇಡುವಲ್ಲಿ ಯಾರ ಮನೆಯೆಂದಾಗಲಿ, ಮನೆಯು ಚಿಕ್ಕದು-ದೊಡ್ಡದು ಎಂಬ ಭೇದವನ್ನು ಎನಿಸದೆ ಕೌಶಂಬಿ ಪಟ್ಟಣಕ್ಕೆ ಬಂದು ಅಗ್ನಿಭೂತಿಯ ಮನೆಯನ್ನು ಪ್ರವೇಶಿಸಿದರು. ಅಗ್ನಿಭೂತಿಯು ತಮ್ಮ ಉನ್ನತಿಗೆ ಕಾರಣವಾಗಿರುವ ಗುರುಗಳ ಕಂಡು ಅತ್ಯುತ್ಸಾಹದಿಂದ ಅವರ ಕಾಲನ್ನು ತೊಳೆದು ಉನ್ನತ ಆಸನದಲ್ಲಿ ಕುಳ್ಳಿರಿಸಿ, ಒಂಬತ್ತು ವಿಧದ ಸತ್ಕಾರಗಳಿಂದಲೂ, ಶ್ರದ್ಧೆ, ಭಕ್ತಿ ಮುಂತಾದ ಏಳು ಗುಣಗಳಿಂದ ಕೂಡಿದವನಾಗಿ ಪರಿಶುದ್ಧವಾದ ಆಹಾರವನ್ನು ಅತ್ಯಂತ ಭಕ್ತಿಯಿಂದ ಬಡಿಸಿದನು. ಸೂರ್ಯಮಿತ್ರಾಚಾರ್ಯರು ಊಟ ಮಾಡಿ 'ದಾನ ಅಕ್ಷಯವಾಗಲಿ' ಎಂದು ಆಶೀರ್ವಾದಿಸಿದರು'' (ಪು. 17) ಹರಸಿದರು.

ಸೂರ್ಯಮಿತ್ರರು ಅಲ್ಲಿಂದ ಹೊರಡುವಾಗ ಅಗ್ನಿಭೂತಿಯು ''ಪೂಜ್ಯರೇ, ನಿಮ್ಮ ಕಿರಿಯ ಶಿಷ್ಯನನ್ನೂ ಹರಸಿ ಹೋಗಿ'' ಎಂದು ಹೇಳಿ ಅವರನ್ನು ವಾಯುಭೂತಿಯ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ದೊಡ್ಡದಾದ ಲೋಹಾಸನದಲ್ಲಿ ಕುಳಿತು ಹಲವು ಮಂದಿ ಬ್ರಾಹ್ಮಣರಿಗೆ ಬೋಧಿಸುವಂತೆ ಗರ್ವದಿಂದ ಕುಳಿತಿದ್ದ ವಾಯುಭೂತಿಯು ಮನೆಗೆ ಬಂದ ಗುರುಗಳಿಗೆ ವಂದಿಸದೆ ಇದ್ದಾಗ, ಅಗ್ನಿಭೂತಿಯು ಇವರು ನಮ್ಮ ಗುರುಗಳು ನಮ್ಮ ಉನ್ನತಿಯ ಏಳಿಗೆಗೆ ಕಾರಣರಾಗಿರುವ ಸೂರ್ಯಮಿತ್ರಾಚಾರ್ಯರು ಬಂದಿರುವರು ಅವರನ್ನು ಸತ್ಕರಿಸಿ, ಗೌರವಿಸು ಎಂದು ಹೇಳಿದಾಗ, ವಾಯುಭೂತಿಯು ಸ್ವಂತ ತಂಗಿಯ ಮಕ್ಕಳೆಂದು ತಿಳಿದು ಏಳೆಂಟು ವರ್ಷಗಳ ಕಾಲ ಕಟ್ಟುನಿಟ್ಟಾಗಿ ನಡೆಸಿಕೊಂಡಿದುದಕ್ಕೆ ಹೀಗೆ ಮನದಲ್ಲಿ ಕೋಪ ತಾಳಿದನು: ''ನಾವು ಭಿಕ್ಷೆ ಬೇಡಿ ಅಲೆದಾಡಿ ತಂದ ಅನ್ನಕ್ಕೆ ಸೇರಿಸಲು ಎಣ್ಣೆಯನ್ನಾಗಲೀ ಉಪ್ಪನ್ನಾಗಲೀ ಮಜ್ಜಿಗೆಯನ್ನಾಗಲೀ ನಮ್ಮ ಮಾವ ನಮಗೆ ಎಂದಿಗೂ ಕೊಡಲೂ ಇಲ್ಲ, ಕೊಡಿಸಲೂ ಇಲ್ಲ. ಕೆರೆಗೆ ಹೋಗಿ ಸ್ನಾನ ಮಾಡುವ ಸಂದರ್ಭದಲ್ಲಿ ತಲೆಗೆ ಹಚ್ಚಲು ಎಣ್ಣೆಯನ್ನಾದರೂ ಹೊಯಿಸಿದವನಲ್ಲ. ತಾನಾದರೋ ದಿವ್ಯವಾದ ಆಹಾರಗಳನ್ನು ಪ್ರತಿದಿನವೂ ಹಲವರು ನಂಟರನ್ನೂ, ಆಳುಗಳನ್ನೂ ಕೂಡಿಕೊಂಡು ಉಣ್ಣುತ್ತಿದ್ದನು. ಹಬ್ಬದ ದಿವಸದಲ್ಲಾದರೂ 'ಇವರಿಗೆ ಊಟ ಹಾಕಿ' ಎಂದು ಎಂದಾದರೂ ಇವನು ಹೇಳಿದವನಲ್ಲ. ಇವನು ಪಂಚಮಹಾಪಾಪ ಮಾಡಿದವನು ನಮ್ಮಿಬ್ಬರನ್ನೂ ಏಳೆಂಟು ವರ್ಷಗಳವರೆಗೆ ಶತ್ರುಗಳೆಂದು ಭಾವಿಸಿದಂತೆ ದಂಡಿಸಿದ್ದಾನೆ'' (ಪು.12) ಎಂಬ ಕ್ರೋಧಭಾವವನ್ನು ಆವರೆಗೂ ಜೀವಂತವಾಗಿರಿಸಿಕೊಂಡಿದ್ದ ವಾಯುಭೂತಿಯು, ಅಣ್ಣನ ಮಾತಿನಿಂದ ಕುಪಿತನಾಗಿ ಈ ಮುಂದಿನಂತೆ ಜರಿಯುತ್ತಾನೆ: ''ಇದೇನೊಳ್ಳಿದರ್ಗ್ಗೆನ್ನಂ ಪೊಡೆವಡಿಸಿದಪ್ಪೈ ಪೇಟೆಂದುಮಶುಚಿಗಳ್ ಮಲಗ್ರಸ್ತರೆಂದಪ್ಪೊಡಂ ಮಿಂದಱಿಯದವರಿವರ ಕಾಲ್ಗೆಱಗುವೆಂ ಗಡ'' ಎಂದು ನಿಂದಿಸುತ್ತಾನೆ. ಅವರನ್ನು ತಾನು ಮೂರ್ಖನೂ, ಅವಿವೇಕಿಯೂ ಆಗಿದ್ದ ನನ್ನಂತವನನ್ನು ಶಿಷ್ಯನನ್ನಾಗಿ ಸ್ವೀಕರಿಸಿಕೊಂಡು ಉದ್ಧರಿಸಿ ಗುರುವನ್ನು ತುಚ್ಛೀಕರಿಸಿ, ತಿರಸ್ಕರಿಸಿ ಬ್ರಾಹ್ಮಣರ ಸಭಾಮಧ್ಯದಲ್ಲಿ ಅವಮಾನಗೊಳಿಸುತ್ತ, ತನ್ನ ಕೃತಘ್ನತೆಯ ನಡೆಯನ್ನು ಪ್ರದರ್ಶಿಸುತ್ತಾನೆ. ತಮ್ಮನ ಈ ಮಾತುಗಳಿಂದ ಕೋಪಗೊಂಡ ಅಗ್ನಿಭೂತಿ ''ತಲೆಹೋಕನಾದ

ಅಧಮನೇ, ನೀಚನೇ, ಸ್ವಾಮಿಯನ್ನು ಹೀಗೆನ್ನುವೆಯಾ?'' ಎಂದು ವಾಯುಭೂತಿಯನ್ನು ಬೈದನು. ಆಗ ಜೈನಮತ ಸ್ವೀಕರಿಸಿ, ಪರಿವ್ರಾಜಕನಾಗಿರುವ ಸೂರ್ಯಮಿತ್ರಾಚಾರ್ಯರು ಶಿಷ್ಯನು ಮತ್ತು ಅಳಿಯನು ಆಗಿರುವ ವಾಯುಭೂತಿಯ ಮಾತಿಗೆ ಸ್ವಲ್ಪವೂ ಕೋಪಗೊಳ್ಳದೆ, ಅಸಹನೀಯರಾಗದೆ ಸಮಚಿತ್ತರಾಗಿ ಅಗ್ನಿಭೂತಿಗೆ ಹೀಗೆಂದು ಹೇಳುತ್ತಾರೆ.

**''ಗಾಹೆ ॥ ಣಿಂದಂತಂ ಸಿಳಹಂತಂ ಸತ್ತುಂ ಮಿತ್ತುಂ ತಹೇವ ಸುಖ ದುಕ್ಖಂ ।**
**ಜೋ ಸಮಭಾವಇ ಪೆಚ್ಚ ಇ ಸೋ ಸಮಣೋ ಸೋಯ ಪವ್ವಯಿಇ ॥**
**ವೃತ್ತ ॥ ಆಕೃಷ್ಟೇವ ವಚಸಾ ನ ತು ತಾಡಿತೋಸ್ಮಿ**
**ಸಂತಾಪಿತೋಸ್ಮಿ ನ ತು ಮೇ ಹೃತಮುತ್ತಮಾಂಗಂ**
**ಪ್ರಾಣಾ ಹೃತಾಃ ಮಮ ಪರೈರ್ನ ತು ಮೇ ಸಮಾಧಿಃ**
**ಇತ್ಯಾತ್ಮಚಿಂತನ ಪರಂಪರಯಾ ಕ್ಷಮೇತ'' (ಪು. 18)**

''ನಿಂದಿಸುವವನನ್ನೂ, ಹೊಗಳುವವನ್ನೂ, ಶತ್ರುವನ್ನೂ, ಮಿತ್ರನನ್ನೂ ಹಾಗೆಯೇ ಸುಖ ದುಃಖವನ್ನೂ ಯಾವನು ಸಮಭಾವದಿಂದ ಭಾವಿಸುವನೋ ಮತ್ತು ನೋಡುವನೋ ಅವನು ಸವಣನು [ಜೈನಯತಿ] ಅವನೇ ಪರಿವ್ರಾಜಕನು. ವಾಯುಭೂತಿ ನನ್ನನ್ನು ಮಾತುಗಳಿಂದ ನಿಂದಿಸಿದ್ದಾನಲ್ಲದೆ ಹೊಡೆದಿಲ್ಲ. ದುಃಖಕ್ಕೆ ಈಡು ಮಾಡಿದ್ದಾನಲ್ಲದೆ ನನ್ನ ತಲೆಯನ್ನು ಕತ್ತಿರಿಸಿಕೊಂಡು ಹೋಗಿಲ್ಲ. ನನ್ನ ಪ್ರಾಣಗಳು ಇತರರಿಂದ ಅಪಹರಿಸಲ್ಪಟ್ಟಿವೆ, ಆದರೆ ನನ್ನ ಧ್ಯಾನಸ್ಥಿತಿ ಉಳಿದಿದೆ. ಈ ರೀತಿಯ ಆತ್ಮಚಿಂತನೆಗಳನ್ನು ಅನುಕ್ರಮವಾಗಿ ಮಾಡುತ್ತ ಅವನನ್ನು ಕ್ಷಮಿಸಬೇಕು'' ಎಂದು ತಿಳಿಸುತ್ತ, ಸಮಚಿತ್ತ ಮತ್ತು ಕ್ಷಮಾಗುಣದ ಪ್ರಯೋಜನ ಮತ್ತು ಮಹತ್ವವನ್ನು ಅರುಹುವ ಮೂಲಕ ಸವಣನ (ಜೈನ ಗುರುವಿನ) ಗುಣಸ್ವಭಾವಗಳನ್ನು ಹೇಳಿದನು(ಪು. 18). ತಮ್ಮನಾದ ವಾಯುಭೂತಿಯು ಗುರುವಿಗೆ ಬ್ರಾಹ್ಮಣರ ಸಭಾ ಮಧ್ಯದಲ್ಲಿಯೇ ಅಗೌರವವಾಗಿ ಮಾತನಾಡಿದ ತಪ್ಪಿಗಾಗಿ ಹಾಗೂ ತನ್ನಿಂದಾಗಿ ಗುರುವು ಅವಮಾನದ ಮಾತುಗಳನ್ನು ಕೇಳುವಂತಾಯಿತು ಎಂಬ ಭಾವನೆಯಿಂದ ಗುರುವಿನಲ್ಲಿ ಕ್ಷಮೆಯನ್ನು ಬೇಡಿ, ''ಬೈಸಿದ ಪಾಪಪರಿಹಾರಕ್ಕೆ ಬೇರೆ ಮಾರ್ಗವಿಲ್ಲ. ನನಗೆ ದೀಕ್ಷೆಯನ್ನು ದಯಪಾಲಿಸಿ'' ಎಂದು ಬೇಡಿಕೊಂಡು ತನ್ನಿಂದ ಘಟಿಸಿದ ಗುರುನಿಂದೆಯ ಪ್ರಾಯಶ್ಚಿತ್ತಕ್ಕಾಗಿ ಗುರುವಿನಿಂದ ಜೈನದೀಕ್ಷೆಯನ್ನು ಸ್ವೀಕರಿಸಿ ಅವರೊಂದಿಗೆ ಸಂಚರಿಸುತ್ತ ಹೋಗುತ್ತಾನೆ.

ಈ ಮೇಲೆ ಪ್ರಸ್ತಾಪಿಸಿದ ಪ್ರಸಂಗಗಳಲ್ಲಿ, ಗುರುವಾದ ಸೂರ್ಯಮಿತ್ರರು ತಂಗಿಯ ಮಕ್ಕಳೆಂದು ತಿಳಿದೂ, ಗೊತ್ತಿಲ್ಲವೆಂದು ಹೇಳಿ ವಿದ್ಯಾರ್ಜನೆ ಮಾಡಿಸುವ ಮನೋಧೋರಣೆ ಸರಿಯಾದುದೆ? ಕಲಿಸಿದ ಸೂರ್ಯಮಿತ್ರ ಗುರುವಿನಲ್ಲಿ ಕೋಪಿಸಿಕೊಳ್ಳುವುದು, ಸೇಡಿನ ಭಾವನೆಯನ್ನು ತಾಳುವುದು ಶಿಷ್ಯನಾದವನಿಗೆ ಉಚಿತವಾದುದೇ? ಗುರುವಿನ ಮೇಲಿನ ಕೋಪದಿಂದಾಗಿ ತನ್ನ ಅಣ್ಣ ಮತ್ತು ಅತ್ತಿಗೆಯರಲ್ಲಿಯೂ ಅಸಮಾಧಾನವನ್ನು ಹೊಂದುವುದು, ಅವರನ್ನು ಸಿಟ್ಟಿನಿಂದ ಜಡಿಯುವುದು ಅನುಚಿತವಾದ ನಡೆಯಾಗುವುದಿಲ್ಲವೇ? ಗುರುವನ್ನು ನಿಂದನೆ ಮಾಡಿದ ತಪ್ಪಿಗೆ ವಾಯುಭೂತಿಯು ಹಲವು ಹೀನ ಜನ್ಮಗಳನ್ನು ಎತ್ತಿದ ಎಂದು ಚಿತ್ರಿಸಿರುವ ಕವಿಯ ಉದ್ದೇಶವೇನಾಗಿರಬಹುದು? ಎಂಬ ಪ್ರಶ್ನೆಗಳನ್ನು ಹಾಕಿಕೊಂಡು ಚರ್ಚೆಯನ್ನು ಮುಂದುವರಿಸಬಹುದು.

ಮೊದಲಿಗೆ, ಗುರುವಾದ ಸೂರ್ಯಮಿತ್ರರು ತಂಗಿಯ ಮಕ್ಕಳೆಂದು ಅರಿತು ಗೊತ್ತಿಲ್ಲವೆಂದು ಹೇಳಿ ವಿದ್ಯಾರ್ಜನೆ ಮಾಡಿಸುವ ಮನೋಧೋರಣೆ ಸರಿಯಾದುದೆ?

ಎನ್ನುವ ಸಂಗತಿಯನ್ನು ಪರಿಶೀಲಿಸೋಣ. ಗುರುವಾದವನು ವಿದ್ಯಾರ್ಥಿಗಳಿಗೆ ಶಿಸ್ತಿನಿಂದ ವಿದ್ಯಾಭ್ಯಾಸವನ್ನು ಮಾಡಿಸಿ, ಅವರನ್ನು ವಿದ್ಯಾವಂತರು, ವಿವೇಕಿಗಳು, ಬುದ್ಧಿವಂತನ್ನಾಗಿಸಿ ರೂಪಿಸುವುದು ಗುರುವಿನ ಆದ್ಯಕರ್ತವ್ಯವಾಗಿರುತ್ತದೆ. ಗುರುವು ವಿದ್ಯಾರ್ಥಿಗಳಿಗೆ ಕಲಿಸುವ ಸಮಯದಲ್ಲಿ ಕಲಿಕಾರ್ಥಿಯು ಮಗನೆಂದು, ಸಂಬಂಧಿಕರ ಮಕ್ಕಳೆಂದು, ಸ್ನೇಹಿತರ ಮಕ್ಕಳೆಂದು ಸಲುಗೆಯನ್ನು ಕೊಡುವುದು ಗುರುವಿನ ಉಚಿತವಾದ ನಡೆಯಲ್ಲ. ಹಾಗೆ ಮಾಡಿದರೆ ವಿದ್ಯಾರ್ಥಿಗಳು ಸರಿಯಾಗಿ ವಿದ್ಯಾಭ್ಯಾಸ ಮಾಡದೇ ಹೋಗಬಹುದು. ಕಲಿಸುವ ಗುರು ಶಿಸ್ತಿನಿಂದ ಇದ್ದಾಗ ಮಾತ್ರ ವಿದ್ಯಾರ್ಜನೆಯು ಪರಿಣಾಮಕಾರಿಯಾಗಿರುತ್ತದೆ. ವಿದ್ಯಾರ್ಥಿಯು ಶಿಸ್ತಿನಿಂದ ಶ್ರಮವಹಿಸಿ, ಪ್ರಾಮಾಣಿಕತೆಯಿಂದ ವಿದ್ಯಾಭ್ಯಾಸವನ್ನು ಮಾಡಬೇಕಾಗಿರುತ್ತದೆ. ಆಗಲೇ ಕಲಿಕೆಯು ಸಾರ್ಥಕವಾಗುತ್ತದೆ ಎನ್ನುವ ಮನೋಭಾವವನ್ನು ಸಹಜವಾಗಿ ಬಹುಪಾಲು ಗುರುಗಳು ನಂಬಿಕೊಂಡಿರುತ್ತಾರೆ. ಇದು ನಿಜವೂ ಹೌದು. ಈ ಹಿನ್ನೆಲೆಯಲ್ಲಿ ಸೂರ್ಯಮಿತ್ರ ಆಚಾರ್ಯರ ನಡೆ–ನುಡಿಗಳನ್ನು ಗಮನಿಸಿದರೆ, ಅವರು ತನ್ನ ತಂಗಿಯಾದ ಕಾಶ್ಯಪಿ ಮಕ್ಕಳಾದ ಅಗ್ನಿಭೂತಿ ಮತ್ತು ವಾಯುಭೂತಿಯವರು ಈಗಾಗಲೇ ತಮ್ಮ ತಂದೆಯು ನೀಡಿದ ಸಲುಗೆಯಿಂದ ಸರಿಯಾಗಿ ಏನನ್ನು ಕಲಿಯದೇ ವಿಲಾಸಿಗಳಾಗಿ ಕಾಲ ಕಳೆದು ತಂದೆ ಮಂತ್ರಿಯಾಗಿದ್ದ ರಾಜನ ಸಭೆಯಲ್ಲಿ ಅವಮಾನಿತರಾಗಿ, ಏನು ಲೋಕಜ್ಞಾನವಿಲ್ಲದೆ ದಡ್ಡರಾಗಿ ತಮ್ಮಲ್ಲಿ ವಿದ್ಯಾರ್ಜನೆಗಾಗಿ ಬಂದವರಿಗೆ ತಮ್ಮ ವೈಯಕ್ತಿಕ ಸಂಬಂಧಗಳ ವಿವರಗಳನ್ನು ಹೇಳಿಕೊಂಡು ಆತಿಥ್ಯ ನೀಡಿ ಅಭ್ಯಾಸ ಮಾಡಿಸುವುದು ಉಚಿತವಾದುದೇ? ಅಲ್ಲ. ಹಾಗಾಗಿ, ಇದು ಒಬ್ಬ ಗುರುವಿನ ವಿವೇಚನಾಯುಕ್ತವಾದ ನಡೆ ಎಂದು ತೋರುತ್ತದೆ.

ಮುಂದುವರಿದು, ಕಲಿಸಿದ ಸೂರ್ಯಮಿತ್ರ ಗುರುವಿನಲ್ಲಿ ಕೋಪಿಸಿಕೊಳ್ಳುವುದು, ಸೇಡಿನ ಭಾವನೆಯನ್ನು ತಾಳುವುದು, ಗುರುವನ್ನು ಬ್ರಾಹ್ಮಣರ ಸಭಾಮಧ್ಯದಲ್ಲಿ ತುಚ್ಛೀಕರಿಸಿ ಬೈದು ಅವಮಾನಗೊಳಿಸುವುದು ಶಿಷ್ಯನಾದವನಿಗೆ ಉಚಿತವಾದುದೇ? ಗುರುನಿಂದೆಯ ಪರಿಣಾಮ ಎಂತಹದು? ಎಂದು ಗಮನಿಸುವುದಾದರೆ, ಆ ಕ್ಷಣದ ವಾಯುಭೂತಿಯ ನಡೆ–ನುಡಿಯು ಹೇಗಿದೆ ಎಂದರೆ, ಗುರುಸಮಾನನು, ವಿವೇಕಿಯೂ ಆದ ಕೃಷ್ಣನು ಪಾಂಡವರ ಪರವಾಗಿ ಸಂಧಾನಕ್ಕೆಂದು ಹಸ್ತಿನಾವತಿಯ ದುರ್ಯೋಧನನ ಆಸ್ಥಾನಕ್ಕೆ ಬಂದನು. ಅಲ್ಲಿನ ರಾಜಸಭೆಯಲ್ಲಿ ಭೀಷ್ಮ, ದ್ರೋಣ ಮೊದಲಾದ ಹಿರಿಯರು, ಸಾಮಂತ ರಾಜರು, ಪುರೋಹಿತರು ಮುಂತಾದವರಿಂದ ತುಂಬಿದ್ದ ಸಭೆಯಲ್ಲಿ ಎತ್ತರದ ಆಸನದಲ್ಲಿ ಮಹಾರಾಜನಾಗಿರುವ ದುರ್ಯೋಧನ ವಿರಾಜಮಾನನಾಗಿದ್ದನು. ಆ ಸಭೆಗೆ ಕೃಷ್ಣ ಆಗಮಿಸಿದಾಗ ದುರ್ಯೋಧನನ್ನು ಹೊರತುಪಡಿಸಿ ಅಲ್ಲಿ ನೆರದಿದ್ದ ಎಲ್ಲರೂ ಎದ್ದುನಿಂತು ಗೌರವ ಸೂಚಿಸಿದರು. ಗರ್ವಿಷ್ಠನು, ಅಹಂಕಾರಿಯೂ ಆಗಿದ್ದ ದುರ್ಯೋಧನ ಕೃಷ್ಣನ ಆಗಮನವನ್ನು ಕಂಡು ಆತನ ಸತ್ಕರಿಸುವುದಿರಲಿ ಗೌರವದಿಂದ ಮಾತನಾಡಿಸದೇ ಒಬ್ಬ ಸಾಮಾನ್ಯ ರಾಯಭಾರಿಯಂತೆ, ದೂತನಂತೆ ಇತ್ತ ಬಂದ ಬರವೇನು? ಹೇಳು ಎಂದು ದರ್ಪದಿಂದ ಮಾತನಾಡಿದವನು.

ವಾಯುಭೂತಿಯು ಗರ್ವದಿಂದ ಗುರುವು, ಜೈನಋಷಿಯೂ ಆಗಿದ್ದ ಸೂರ್ಯಮಿತ್ರರನ್ನು ಮತ್ತು ಜೈನಧರ್ಮವನ್ನು ನಿಂದಿಸಿ ಬೈದುದರ ಪರಿಣಾಮವಾಗಿ ಏಳುದಿನದೊಳಗೆ ಔದುಂಬರ ಕುಷ್ಠರೋಗಕ್ಕೆ ಗುರಿಯಾಗಿ ಹುಳುವಾಗಿ ಯಾತನೆಪಟ್ಟು ಸತ್ತು, ಆ ಪಟ್ಟಣದಲ್ಲೇ ಡೊಂಬರ ಮನೆಯಲ್ಲಿ ಹೆಣ್ಣುಕತ್ತೆಯಾಗಿ ಹುಟ್ಟಿ ಯಾತನೆ ಪಟ್ಟು ಸತ್ತು, ಹೆಣ್ಣುಹಂದಿಯಾಗಿ, ಹೆಣ್ಣುನಾಯಿಯಾಗಿ, ಕೊನೆಗೆ ಹೊಲತಿಯರ ಮನೆಯಲ್ಲಿ

ಹುಟ್ಟುಕುರುಡಿಯೂ ಕುರೂಪಿಯೂ ಆಗಿ ಹುಟ್ಟಿದಳು. ಮುಂದೆ, ಆಕೆಗೆ ಸೂರ್ಯಮಿತ್ರರ ಗುರುಗಳ ಅಪ್ಪಣೆಯಂತೆ ಅಗ್ನಿಭೂತಿಯು ಉಪದೇಶ ಮಾಡಿ ವ್ರತಗಳನ್ನು ನೀಡಿ, ಆಕೆಯು ಎತ್ತಿದ ಪೂರ್ವಭವಗಳ ಕುರಿತು ಮತ್ತು ವಾಯುಭೂತಿಯಾಗಿದ್ದಾಗ ಮಾಡಿದ ಗುರುನಿಂದೆಯ ಪರಿಣಾಮವಾಗಿ ಇಷ್ಟೆಲ್ಲಾ ಯಾತನೆಯನ್ನು ಅನುಭವಿಸಬೇಕಾಯಿತು ಎಂದು ವಿವರಿಸಿ, ಧರ್ಮಬೋಧೆಯನ್ನು ಮಾಡಿದನು. ಪಂಚಾಣುವ್ರತಗಳನ್ನು ಹೇಳುತ್ತಾ, ಮೋಕ್ಷ, ದೈವ ಮತ್ತು ಧರ್ಮದ ಕುರಿತು ಪ್ರಸ್ತಾಪಿಸುವ ಅಂಶಗಳು ಹೀಗಿವೆ:

“ಧರ್ಮದ ಫಲದಿಂದ ಜೀವವು ಸ್ವರ್ಗ ಮರ್ತ್ಯಗಳ ಸುಖವನ್ನು ಅನುಭವಿಸಿದ ಮೇಲೆ ಮೋಕ್ಷದ ಸುಖವನ್ನು ಪಡೆಯುವುದು. ಇನ್ನು ಆ ಧರ್ಮವೆಂಬುದು ಹೇಗೆಂದರೆ –

ಗಾಹೆ; ಸೋ ಧಮ್ಮೋ ಜತ್ಥ ದಯಾ ಸೋವಿ ತಓ ವಿಸಯಣಿಗ್ಗಹೋ ಜತ್ಥ

ದಸ ಅಟ್ಠ ದೋಸರಹಿ ಓ ಸೋದೇವೋ ಣತ್ಥಿ ಸಂದೇಹೋ॥

ಎಲ್ಲಿ ದಯೆ ಇದೆಯೋ ಅದು ಧರ್ಮವು ಮತ್ತು ಎಲ್ಲಿ ಇಂದ್ರಿಯನಿಗ್ರಹವಿದೆಯೋ ಅದು ಕೂಡ ಧರ್ಮವು.

ಹದಿನೆಂಟು ದೋಷಗಳಿಲ್ಲದವನು ದೇವನು. ಇದರಲ್ಲಿ ಸಂಶಯವಿಲ್ಲ. ಈ ರೀತಿಯಾಗಿ ಹಸಿವು, ಬಾಯಾರಿಕೆ, ಹೆದರಿಕೆ, ಹಗೆತನ, ಪ್ರೀತಿ, ಮೋಹ, ಚಿಂತೆ, ಮುಪ್ಪು, ರೋಗ, ಮರಣ, ಬೆವರು, ಖೇದ, ಮದ, ರತಿ, ಆಶ್ಚರ್ಯ, ಜನನ, ನಿದ್ರೆ, ವಿಷಾದ ಎಂಬೀ ಹದಿನೆಂಟು ದೋಷಗಳಿಲ್ಲದವನು ದೇವನು. ಅಂತಹ ದೇವನು ಹೇಳಿದುದು ಶಾಸ್ತ್ರವೆನಿಸುವುದು. ಆ ಶಾಸ್ತ್ರ ಹೇಳಿದಂತೆ ಬಾಹ್ಯ ಮತ್ತು ಅಭ್ಯಂತರ ಎಂಬ ಪರಿಗ್ರಹಗಳೆಲ್ಲವನ್ನೂ ಬಿಟ್ಟು ಹನ್ನೆರಡು ತೆರನಾದ ತಪಸ್ಸಿನಲ್ಲಿ ಪ್ರಖ್ಯಾತನಾಗಿ ಪಂಚೇಂದ್ರಿಯಗಳನ್ನು ಗೆದ್ದು ಹಸಿವು, ಬಾಯಾರಿಕೆ ಮುಂತಾದ ಇಪ್ಪತ್ತೆರಡು ಪರೀಷಹಗಳನ್ನು ಸಹಿಸಿ ಯಮ, ನಿಯಮ, ಸ್ವಾಧ್ಯಾಯ, ಧ್ಯಾನಗಳ ಆಚರಣೆಯಲ್ಲಿ ತತ್ಪರರಾಗಿ ತಪಸ್ಸನ್ನು ಮಾಡುವ ಋಷಿಗಳು ತಪಸ್ಸೇ ಐಶ್ವರ್ಯವಾಗಿರುವವರು. ಕೊಲ್ಲದಿರುವುದೇ ಧರ್ಮ–ಹೀಗೆ ನಂಬಿಕೊಂಡು ವ್ರತಗಳನ್ನು ಸ್ವೀಕರಿಸಿ ಆಚರಿಸುವುದು ಧರ್ಮವು. ಎಂದು ಅಗ್ನಿಭೂತಿ ಋಷಿ ಆಕೆಗೆ ತಿಳಿಯುವಂತೆ ಧರ್ಮವನ್ನು ತಿಳಿಸಿದನು” (ವಡ್ಡಾರಾಧನೆ, ಪು.ಸಂ. 25).

ಇಷ್ಟೆಲ್ಲವನ್ನೂ ಬೋಧಿಸಿ, ವಾಯುಭೂತಿಯನ್ನು ಸನ್ಮಾರ್ಗದಡೆಗೆ ತಂದು ದೈವದ, ಧರ್ಮದ ಹಾಗೂ ಮೋಕ್ಷ ದಾರಿಯನ್ನು ಅರುಹಿದ ಅಗ್ನಿಭೂತಿಯ ಮನದಲ್ಲಿ ತುಂಬಿರುವುದು ಆತನೂ ತನ್ನ ತಮ್ಮ ಎಂಬ ಋಣಾನುಬಂಧ ಎಂಬುದನ್ನು ಇಲ್ಲಿ ಗಮನಿಸಬೇಕು. ಈ ಸೋದರ ಸಂಬಂಧವೇ, ವಾಯುಭೂತಿಯು ಹುಟ್ಟುಕುರುಡಿಯಾಗಿ ಹಸಿವಿನಿಂದ ನರಳುವುದನ್ನು ಕಂಡು ಆಕೆಯ ಸ್ಥಿತಿಗೆ ಮರುಗುವನು, ಆಕೆಯ ಉದ್ಧಾರಕ್ಕಾಗಿ ಶ್ರಮಿಸುವನು ಅಗ್ನಿಭೂತಿ. ಈ ಸೋದರ ಸಂಬಂಧದ ಋಣವೇ ನಿನ್ನನ್ನು ಸೆಳೆಯುತ್ತಿರುವುದು ಎಂದು ಗುರುವಾದ ಸೂರ್ಯಮಿತ್ರಾಚಾರ್ಯರು ಹೇಳುತ್ತಾರೆ.

ಇನ್ನು, ಅಗ್ನಿಭೂತಿ ಜೈನದೀಕ್ಷೆಯನ್ನು ಸ್ವೀಕರಿಸುವಲ್ಲಿ ಇರುವುದು ಪ್ರಾಯಶ್ಚಿತ್ತವೋ, ಪಶ್ಚಾತ್ತಾಪವೋ, ಗುರುಋಣವೋ ಎಂಬ ಪ್ರಶ್ನೆ ಹಾಕಿಕೊಂಡು ಮುಂದುವರಿಯುವುದಾದರೆ, ತಮ್ಮನಾದ ವಾಯುಭೂತಿಯು ಗುರುವಿಗೆ ನಿಂದಿಸಿ ಅಗೌರವದ ಮಾತುಗಳನ್ನು ಆಡಿದ ತಪ್ಪಿನ ಪಾಪಪರಿಹಾರಕ್ಕಾಗಿ ಜೈನದೀಕ್ಷೆಯನ್ನು ನೀಡಿಯೆಂದು ಅಗ್ನಿಭೂತಿಯೇ ಬೇಡಿಕೊಳ್ಳುವ ಮಾತು ಕಥೆಯಲ್ಲಿ ಬರುತ್ತದೆ. ಇದೊಂದು ಘಟನೆ ಮಾತ್ರವೇ ಅವನಿಗೆ ಜೈನದೀಕ್ಷೆಯನ್ನು ಪಡೆಯಲು ಕಾರಣವಾಗಿದೆಯೇ? ಅಥವಾ ಅವನು ವಾಯುಭೂತಿಯ ಬೈಗುಳದ

ಮಾತುಗಳಿಗೆ ಕೋಪಿಸಿಕೊಳ್ಳದೆ ಅವನನ್ನು ಕ್ಷಮಿಸುತ್ತ, ಸವಣನ ಗುಣಗಳು ಹೇಗಿರಬೇಕೆಂದು ಹೇಳಿದ ಮಾತುಗಳಿಂದ ಪ್ರಭಾವಿತನಾಗಿ ಜೈನಧರ್ಮವನ್ನು ಸ್ವೀಕರಿಸಲು ಸಿದ್ಧನಾಗಿರಬಹುದೆ? ಅಥವಾ ಈ ಮೊದಲು ಅವರಿಂದಲೇ ವಿದ್ಯಾಭ್ಯಾಸ ಮಾಡಿ ಬುದ್ಧಿವಂತರು ಮತ್ತು ವಿವೇಕಿಗಳಾಗಿ ಉನ್ನತವಾದ ಸ್ಥಾನಮಾನ ಗೌರವಾದಿಗಳನ್ನು ಪಡೆದು, ಗೌರವಯುತ ಸಮೃದ್ಧ ಜೀವನವನ್ನು ನಡೆಸಲು ಕಾರಣರಾಗಿರುವ ಗುರುವೇ ಮೋಕ್ಷದ ಹಾದಿಗೂ ಅಲೌಕಿಕ ಬದುಕಿಗೂ ಕಾರಣವಾಗಲಿ ಎಂಬ ಭಾವನೆ ಇರಬಹುದೆ? ಅಥವಾ ತಮಗೆ ಕಲಿಸುವಾಗ ಬ್ರಾಹ್ಮಣರಾಗಿದ್ದರೂ ಗುರುವು ಈಗ ಜೈನಧರ್ಮದ ಪ್ರೇರಣೆ ಮತ್ತು ಪ್ರಭಾವದಿಂದ ಜೈನದೀಕ್ಷೆಯನ್ನು ಪಡೆದುಕೊಂಡು ಪರಿವ್ರಾಜಕರಾಗಿ ಸಂಚರಿಸುತ್ತ ಬಂದಿದ್ದಾರೆ. ಹಾಗಾಗಿ ಜೈನಧರ್ಮ ಶ್ರೇಷ್ಠವಾದುದು ಎಂದು ಭಾವಿಸಿರಬಹುದೇ? ಅಥವಾ ಗುರುವಿನಲ್ಲಿ ಗೌರವಮೂಡಿ ತನ್ನ ಮುಂದಿನ ಜೀವನವನ್ನು ಗುರುವಿನ ಸೇವೆ ಮಾಡುತ್ತ ಗುರುಋಣವನ್ನು ತೀರಿಸಬಹುದು ಎಂದು ಅಗ್ನಿಭೂತಿಯು ಜೈನಧರ್ಮವನ್ನು ಸ್ವೀಕರಿಸಿರಬಹುದೆ ಮತ್ತು ಎಲ್ಲಾ ಪ್ರಶ್ನೆಗಳ ಮತ್ತು ಸಂಶಯಗಳ ಹಿಂದೆ ಹಾಗೂ ಅಗ್ನಿಭೂತಿ ನಡೆ ಮತ್ತು ನುಡಿಗಳ ಒಳಗೆ, ಅವನು ಗುರುವಿನಲ್ಲಿ ಹೊಂದಿರುವ ವಿನಯ, ವಿಧೇಯತೆ ಮತ್ತು ಕೃತಜ್ಞತೆಯ ಭಾವನೆಯು ಇರಬಹುದಾದುದನ್ನು ಗ್ರಹಿಸಬೇಕು. ಗುರುವಿನಲ್ಲಿ ಶಿಷ್ಯನಾದವನು ಸದ್ಭಾವನೆಯನ್ನು ಹೊಂದಿರುವುದೇ ಋಣವಾಗಿದೆ. ಈ ಸದ್ಭಾವವನ್ನು ಅಗ್ನಿಭೂತಿಯಲ್ಲಿ ಇರುವುದನ್ನು ಈ ಮೇಲಿನ ಚರ್ಚೆಯ ಹಿನ್ನೆಲೆ ಗಮನಿಸಬಹುದು.

ಒಟ್ಟಾರೆಯಾಗಿ, ಸುಕುಮಾರಸ್ವಾಮಿಯ ಈ ಕಥೆಯಲ್ಲಿ ಮಕ್ಕಳ ಏಳಿಗೆಯನ್ನು ಬಯಸುವ ತಾಯಿಯ ಮಾತಿನಲ್ಲಿ, ಮಂತ್ರಿ ಮಕ್ಕಳಿಗೆ ಉನ್ನತ ಸ್ಥಾನಮಾನ ಕಲ್ಪಿಸಬೇಕು ಎನ್ನುವ ರಾಜ ನಡೆಯಲ್ಲಿ, ಶಿಷ್ಯಂದಿರನ್ನು ಬುದ್ಧಿವಂತರು ಮತ್ತು ವಿವೇಕಿಗಳಾಗಿ ರೂಪಿಸುವ ಗುರುವಿನ ನಡೆ-ನುಡಿಯಲ್ಲಿ, ತಮ್ಮನ ಉದ್ಧಾರವನ್ನು ಬಯಸುವ ಅಣ್ಣನ ಮನೋಧೋರಣೆಯಲ್ಲಿ ಋಣದ ಮತ್ತು ಋಣ ಸಂದಾಯದ ಅಂಶಗಳು ಮೇಲ್ನೋಟಕ್ಕೆ ಕಂಡುಬರುವುದಿಲ್ಲವಾದರೂ ಅವುಗಳ ಆಂತರ್ಯದಲ್ಲಿ ಋಣದ ಪ್ರಜ್ಞೆಯು ಜಾಗೃತವಾಗಿರುವುದನ್ನು ಕಾಣುತ್ತೇವೆ. ಈ ಋಣ ಪ್ರಜ್ಞೆಯು ಎಲ್ಲರನ್ನು, ಎಲ್ಲವನ್ನು ಆವರಿಸಿಕೊಂಡಿರುವ ಮೌಲ್ಯವಾಗಿ, ವ್ಯಕ್ತಿಯ ಅಭ್ಯುದಯಕ್ಕೂ, ಅಧೀನತೆಗೂ ಕಾರಣವಾಗಿರುವುದು ಕಂಡುಬರುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಕೇಶವ ಭಟ್ಟ ಟಿ., (2017), ಶಿವಕೋಟ್ಯಾಚಾರ್ಯರ ವಡ್ಡಾರಾಧನೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
2. ಪುಟ್ಟಯ್ಯ ಬಿ. ಎಂ., (2015), ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ.
3. ಸೀತಾರಾಮಯ್ಯ ವಿ., (2012), ವಡ್ಡಾರಾಧನೆ, ಬೆಂಗಳೂರು: ಸಪ್ನ ಬುಕ್ ಹೌಸ್.
4. ಹಂಪ ನಾಗರಾಜಯ್ಯ, (1997), ಚಂದ್ರಕೊಡೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ.